## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 118 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್.ವ್ಹಿ.ಸಂಕನೂರ<br>(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 15.07.2024 |
| ಉತ್ತರಿಸುವ ಸಚಿವರು | ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯ ಬೆಂಗಳೂರು ಇದರ ಪ್ರಾಂಶುಪಾಲರು 2024ರಲ್ಲಿ ಜಮ್ಮು-ಕಾಶ್ಮೀರ ವಿದ್ಯಾಲಯ ಎಂ.ಎಸ್.ಸಿ. ನರ್ಸಿಂಗ್ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ತಮ್ಮ ಮಹಾವಿದ್ಯಾಲಯದ ಎಂ.ಎಸ್.ಸಿ ನರ್ಸಿಂಗ್ ವಿದ್ಯಾರ್ಥಿಗಳಿಂದಲೇ ಒತ್ತಡಹೇರಿ ಮೌಲ್ಯಮಾಪನ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬೇರೆ ರಾಜ್ಯದ ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳ ಎಂ.ಎಸ್.ಸಿ ನರ್ಸಿಂಗ್ ಉತ್ತರ ಪತ್ರಿಕೆಗಳನ್ನು ಪ್ರಾಂಶುಪಾಲರು ತಮ್ಮ ಕಾಲೇಜಿನ ವಿದ್ಯಾರ್ಥಿಗಳಿಂದ ಮಾಡಿಸಿರುವ ಬಗ್ಗೆ ವೈದ್ಯಕೀಯ ಶಿಕ್ಷಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಇವರಿಗೆ ದಾಖಲೆ ಸಹಿತ ಲಿಖಿತ ದೂರು ನೀಡಿರುವುದು ನಿಜವೇ; | ಹೌದು |
| ಇ) | ಹಾಗಿದ್ದಲ್ಲಿ, ಯಾವ ದಿನಾಂಕದಂದು ದೂರು ನೀಡಿದ್ದಾರೆ; ಅದಕ್ಕೆ ಏನು ಕ್ರಮ ಕೈಗೊಳ್ಳಲಾಗಿದೆ? (ಮಾಹಿತಿ ನೀಡುವುದು) | ಶ್ರೀಮತಿ. ಮಮತಾ, ಶ್ರೀಮತಿ. ನಾಗರತ್ನಮ್ಮ, ಶ್ರೀಮತಿ. ಸರಸ್ವತಿ, ಶ್ರೀಮತಿ. ರೆಡ್ಡಮ್ಮ, ಶ್ರೀಮತಿ. ಜ್ಯೋತಿ ರವರುಗಳು ಸೇರಿ ದಿನಾಂಕ:27.03.2024ರಂದು ಲಿಖಿತ ದೂರನ್ನು ಸಲ್ಲಿಸಿರುತ್ತಾರೆ.<br><br>ದೂರು ಅರ್ಜಿಯಲ್ಲಿನ ದೂರುಗಳ ಬಗ್ಗೆ ತನಿಖೆ ಕೈಗೊಂಡು, ವರದಿ ಸಲ್ಲಿಸುವಂತೆ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯರವರಿಗೆ ದಿನಾಂಕ:30.04.2024ರಂದು ಪತ್ರ ಬರೆಯಲಾಗಿದೆ. |
| | | ಬಿಎಂಸಿಆರ್‌ಐ ಸಂಸ್ಥೆಯ ವತಿಯಿಂದ ತನಿಖಾ ತಂಡವನ್ನು ರಚಿಸಿದ್ದು, ತನಿಖಾ ತಂಡವು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ವರದಿಯು ಪರಿಶೀಲನಾ ಹಂತದಲ್ಲಿರುತ್ತದೆ. |

ಸಂಖ್ಯೆ: ಎಂಇಡಿ 338 ಎಂಪಿಎಸ್ 2024

**(ಡಾ|| ಶರಣಪ್ರಕಾಶ ಆರ್. ಪಾಟೀಲ್)**
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು